## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 776/2024

**ಸಾಕ್ಷಿಯನ್ನು ದಿಃ 09.12.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಯೋಗೇಶ್ | ಸಿಡಬ್ಲ್ಯೂಃ 3 | ಪಿಡಬ್ಲ್ಯೂಃ 2 |
| ತಂದೆಯ ಹೆಸರು | ಜವರಯ್ಯ | | |
| ವಯಸ್ಸು | 48 ವರ್ಷ | | |
| ಕೆಲಸ | ವ್ಯಾಪಾರ | | |
| ವಾಸಸ್ಥಳ | ರಂಗನಾಥ ಬಡಾವಣೆ, ಕಲ್ಕುಣಿಕೆ | | |

### ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ಚಾಸಾ-1, 2 ಮತ್ತು 4 ಗೊತ್ತು. ಆರೋಪಿ ಗೊತ್ತು. ಚಾಸಾ-1, 2 ಮತ್ತು ಆರೋಪಿತರ ಮಧ್ಯೆ ಯಾವುದೇ ಗಲಾಟೆಯಾಗಿಲ್ಲ. ನಾನು ಗಲಾಟೆಯನ್ನು ನೋಡಿಲ್ಲನಾನು ಯಾವುದೇ ಗಲಾಟೆಯನ್ನು ಬಿಡಿಸಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

### ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ

ದಿಃ 02.12.2023ರಂದು ಬೆಳಿಗ್ಗೆ 7.45 ಗಂಟೆಗೆ ನಮ್ಮ ಗ್ರಾಮದ ಚಾಸಾ-2 ರವರ ಮನೆಯ ಹತ್ತಿರ ಆರೋಪಿತರು ಗುಂಪು ಕಟ್ಟಿಕೊಂಡು ಬಂದು ಚಾಸಾ-1 ರವರನ್ನು ಉದ್ದೇಶಿಸಿ ಬೋಳಿ ಮಗನೇ, ಸೂಳೆ ಮಗನೇ ನಮ್ಮ ಮನೆಯ ಹತ್ತಿರ ಬಂದು ನಮ್ಮ ತಾಯಿಯ ಜೊತೆಯಲ್ಲಿ ಗಲಾಟೆ ಮಾಡಿದ್ದಿರಾ ತಾಕತ್ತು ಇದ್ದರೆ ನನ್ನ ಜೊತೆ ಜಗಳಕ್ಕೆ ಬಾ ಎಂದು 1ನೇ ಆರೋಪಿಯು ಚಾಸಾ-1 ರವರ ಕುತ್ತಿಗೆಯ ಪಟ್ಟಿಯನ್ನು ಹಿಡಿದು ಮುಂದೆ ಹೋಗದಂತೆ ತಡೆದು ನಿಲ್ಲಿಸಿದಾಗ ಚಾಸಾ-1 ರವರನ್ನು ಬಿಡಿಸಲು ಬಂದ ಚಾಸಾ-2 ರವರನ್ನು 2ನೇ ಆರೋಪಿ ತಳ್ಳಿ ಕೆಳಕ್ಕೆ ಬೀಳಿಸಿದ ಎಂದರೆ ಸರಿಯಲ್ಲ. ಆಗ ನಾನು ಮತ್ತು

ಚಾಸಾ-4 ರವರು ಜಗಳ ಬಿಡಿಸಿ ಚಾಸಾ-2 ರವರನ್ನು ಎತ್ತಿ ಸುಧಾರಿಸಿ ನೋಡಿದಾಗ ಅವರ ಬಲಗೈಗೆ ಸಣ್ಣಪುಟ್ಟ ಗಾಯವಾಗಿತ್ತು ಎಂದರೆ ಸರಿಯಲ್ಲ. ನಂತರ ಆರೋಪಿತರು ಚಾಸಾ-1 ರವರಿಗೆ ಮತ್ತೊಮ್ಮೆ ನೀವು ನಮ್ಮ ತಂಟೆಗೆ ಬಂದರೆ ಮುಗಿಸದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆಯನ್ನು ಹಾಕಿ ಹೊರಟುಹೋದರು ಎಂದರೆ ಸರಿಯಲ್ಲ. ನಾನು ಅವರನ್ನು ನೋಡಿದರೆ ಗುರುತಿಸುತ್ತೇನೆ ಎಂದು ಹಾಗೂ ಘಟನೆಯ ಬಗ್ಗೆ ವಿವರವಾದ ಹೇಳಿಕೆನ್ನು ನೀಡಿದ್ದೇನೆ ಎಂದರೆ ಸರಿಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು. ನನಗೆ ಘಟನೆಯ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಹಾಗೂ ನಿಪಿ-2ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. MRH ವಕೀಲರಿಂದಃ**

ಇಲ್ಲ ಎನ್ನುತ್ತಾರೆ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.